**ಓ.ಎಸ್. ನಂ. 45/ 2025** **ಪಿ ಡಬ್ಲ್ಯೂ – 1**

**ದಿನಾಂಕಃ 17.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ದಿನಾಂಕಃ 27.01.2022 ರಂದು ಆಗಿರುವ ನೋಂದಾಯಿತ ಸ್ವಾಧಿನ ರಹಿತ ಕ್ರಯದ ಒಪ್ಪಂದದ ಮೂಲ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ನಿಪಿ–1 ರಲ್ಲಿರುವ ವಾದಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಪ್ರತಿವಾದಿ 1 ರಿಂದ 4 ರವರ ಸಹಿಗಳನ್ನು ನಿಪಿ–1(ಬಿ) ರಿಂದ ನಿಪಿ–1(ಇ) ಎಂದು ಗುರುತಿಸಲಾಯಿತು. ನಿಪಿ–1 ಕ್ಕೆ ಮಾದೇಶ ಶೆಟ್ಟಿ ಮತ್ತು ಮಹೇಶ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ . ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ–2 ಎಂದು ಅಂಚೆ ರಶೀದಿಗಳನ್ನು ನಿಪಿ–2(ಎ) ರಿಂದ ನಿಪಿ–2(ಡಿ) ಎಂದು ಗುರುತಿಸಲಾಯಿತು. ಒಂದು ಅಂಚೆ ಸ್ವಿಕೃತಿ ಪತ್ರವನ್ನು ನಿಪಿ–3 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು. )

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ ದಂ. ಕೊಳ್ಳೇಗಾಲ.**